Received on 11/10/2021
WVP.

ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

ವಿಷಯ: 2021-22ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಛೇರಿ ವೆಚ್ಚ, ಪೀಠೋಪಕರಣ ಹಾಗೂ ಇತರೆ ವೆಚ್ಚಗಳಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆ:ಇಡಿ/65/ಹೆಚ್‌ಪಿಸಿ/2021, ದಿ:17.04.2021, 08.07.2021, 31.08.2021.
2.ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಸಲ್ಲಿಸಿರುವ ಪ್ರಸ್ತಾವನೆಗಳು.
3.ಶವಸಂಸ್ಕಾರ ವೆಚ್ಚಕ್ಕಾಗಿ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಸಲ್ಲಿಸಿರುವ ಪ್ರಸ್ತಾವನೆಗಳು.

* * * * * *

<u>ಪ್ರಸ್ತಾವನೆ:</u>

2021-22ನೇ ಸಾಲಿನ ಆರ್ಥಿಕ ವರ್ಷದಲ್ಲಿ"ಇತರೆ ಸರ್ಕಾರಿ ಕಾಲೇಜುಗಳು" ಅಡಿಯಲ್ಲಿ ಲೆಕ್ಕಶೀರ್ಷಿಕೆ:2202-03-103-2-01 ಉಪಲೆಕ್ಕಶೀರ್ಷಿಕೆ (051) ರಲ್ಲಿ ಕಛೇರಿ ವೆಚ್ಚ, ದೂರವಾಣಿ ವೆಚ್ಚ, ವಿದ್ಯುತ್ ಮತ್ತು ನೀರಿನ ವೆಚ್ಚ, ಪಠ್ಯಪುಸ್ತಕ, ಪೀಠೋಪಕರಣ ಹಾಗೂ ಇತರೆ ವೆಚ್ಚಗಳಿಗಾಗಿ ರೂ.500.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಉಲ್ಲೇಖ(1)ರ ಆದೇಶಗಳಲ್ಲಿ ರೂ.375.00 ಲಕ್ಷಗಳನ್ನು ಹಾಗೂ ಉಪಲೆಕ್ಕಶೀರ್ಷಿಕೆ(041)ರಲ್ಲಿ ಸರ್ಕಾರಿ ಕಾಲೇಜುಗಳ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಪ್ರಯಾಣ ಭತ್ಯೆಗಾಗಿ ರೂ.2.00 ಲಕ್ಷಗಳನ್ನು ಒದಗಿಸಿದ್ದು, ಉಲ್ಲೇಖ(1)ರ ಆದೇಶಗಳಲ್ಲಿ ರೂ.1.50 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತಾರೆ.

ಸದರಿ ಅನುದಾನದಲ್ಲಿ ಉಲ್ಲೇಖ (2)ರ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯ ಮೇರೆಗೆ ಪೀಠೋಪಕರಣ, ಕಾನೂನು ಕಾಲೇಜುಗಳ ಸಂಯೋಜನಾ ಶುಲ್ಕಕ್ಕಾಗಿ ರೂ.23.00 ಲಕ್ಷಗಳು ಹಾಗೂ ಕೆಲವು ಕಾಲೇಜುಗಳಲ್ಲಿ ಸಿಬ್ಬಂದಿಗಳು ನಿಧನ ಹೊಂದಿರುವ ಹಿನ್ನೆಲೆಯಲ್ಲಿ ಶವಸಂಸ್ಕಾರ ವೆಚ್ಚಕ್ಕಾಗಿ ರೂ.0.70 ಲಕ್ಷಗಳ ಮತ್ತು ಪ್ರಯಾಣ ಭತ್ಯೆಗಾಗಿ ರೂ.1.50 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಈ ಆದೇಶ.

## <u>ಆದೇಶ ಸಂಖ್ಯೆ:ಕಾಶಿಇ:05:ಯೋಜನೆ:ಅ.ಬಿ:2021-22, ದಿನಾಂಕ:08.10.2021</u>

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಲೆಕ್ಕಶೀರ್ಷಿಕೆ:2202-03-103-2-01 "ಇತರೆ ಸರ್ಕಾರಿ ಕಾಲೇಜುಗಳು" ಉಪ ಲೆಕ್ಕಶೀರ್ಷಿಕೆ (051)ರಲ್ಲಿ ಪೀಠೋಪಕರಣ, ಕಾನೂನು ಕಾಲೇಜುಗಳ ಸಂಯೋಜನಾ ಶುಲ್ಕ ಮತ್ತು ಶವಸಂಸ್ಕಾರ ವೆಚ್ಚಕ್ಕಾಗಿ ಅನುಬಂಧ-1ರಲ್ಲಿನ ಕಾಲೇಜುಗಳಿಗೆ ರೂ 23.70 ಲಕ್ಷಗಳು, ಉಪ ಲೆಕ್ಕಶೀರ್ಷಿಕೆ (041)ರಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಪ್ರಯಾಣ ಭತ್ಯೆಗಾಗಿ ಅನುಬಂಧ-2ರಲ್ಲಿನ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ರೂ.1.50 ಲಕ್ಷಗಳ ಅನುದಾನವನ್ನು ಆಯಾ ಕಾಲೇಜಿನ ಪ್ರಾಂಶುಪಾಲರು ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಬಿಡುಗಡೆ ಮಾಡಲಾಗಿದ್ದು ಸದರಿ ಅನುದಾನವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ.

--2

ಅನುದಾನವನ್ನು ಬಳಸಿಕೊಳ್ಳುವಾಗ ಈ ಕೆಳಕಂಡ ಷರತ್ತುಗಳನ್ನು ಪಾಲಿಸುವಂತೆಕಟ್ಟುನಿಟ್ಟಾಗಿ ತಿಳಿಸಲಾಗಿದೆ.

1. ಅನುದಾನವನ್ನು ಪ್ರಧಾನ ಲೆಕ್ಕಶೀರ್ಷಿಕೆ:2202-03-103-2-01 ಉಪಲೆಕ್ಕಶೀರ್ಷಿಕೆ (051) ರಲ್ಲಿ ಪೀಠೋಪಕರಣ, ಕಾನೂನು ಕಾಲೇಜುಗಳ ಸಂಯೋಜನಾ ಶುಲ್ಕ ಹಾಗೂ ಶವಸಂಸ್ಕಾರ ವೆಚ್ಚಕ್ಕಾಗಿ ಈ ಲೆಕ್ಕಶೀರ್ಷಿಕೆಯಡಿಯಲ್ಲಿಯೇ ಭರಿಸತಕ್ಕದ್ದು.
2. ಅನುದಾನವನ್ನು ಕೂಡಲೇ ಬಳಸಿಕೊಂಡು ಬಳಕೆ ಪ್ರಮಾಣ ಪತ್ರವನ್ನು ತಪ್ಪದೇ ಕಳುಹಿಸತಕ್ಕದ್ದು.
3. ಅನುದಾನವನ್ನು ಬಿಡುಗಡೆ ಮಾಡಿರುವ ಉದ್ದೇಶಕ್ಕಾಗಿಯೇ ಬಳಸತಕ್ಕದ್ದು.
4. ಅನುದಾನವನ್ನು ವಿನಿಯೋಗಿಸಿಕೊಳ್ಳುವಾಗ ಆರ್ಥಿಕ ನಿಯಮ, ಸರ್ಕಾರಿ ಆದೇಶ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 2000 ಹಾಗೂ ಅದರಡಿಯಲ್ಲಿನ ನಿಯಮಗಳನ್ನು ತಪ್ಪದೇ ಪಾಲಿಸುವುದು.
5. ಕೇಂದ್ರ ಕಛೇರಿಯಿಂದ ಬಿಡುಗಡೆಯಾದ ಅನುದಾನದಲ್ಲಿ ಬಿಲ್ಲಿನ ಮೊತ್ತವನ್ನು ಪಾವತಿಸುವ ಸಮಯದಲ್ಲಿ Sec 51(1) of the KGST Act 2017 and Central GST Act 2017 ಪ್ರಕಾರ ನಿಯಮಗಳಲ್ಲಿ ಅವಕಾಶವಿದ್ದಲ್ಲಿ GST & CGST ಕಟಾಯಿಸಲು ಸೂಚಿಸಿದೆ.
6. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಕೂಡಲೇ ಬಳಸಿಕೊಳ್ಳಲು ಕಟ್ಟುನಿಟ್ಟಾಗಿ ಸೂಚಿಸಿದೆ. ಅನುದಾನ ಅವಶ್ಯವಿಲ್ಲದಿದ್ದಲ್ಲಿ ಕೂಡಲೇ ಅನುದಾನವನ್ನು ಮರುಒಪ್ಪಿಸಲು ಸಹ ಸೂಚಿಸಿದೆ.

(ಟಿಪ್ಪಣಿ ಇ-ಆಫೀಸ್ ಮುಖಾಂತರ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸೂಕ್ತ ಕ್ರಮಕ್ಕಾಗಿ.
2. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು–ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

2021-22ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಲೆಕ್ಕಶೀರ್ಷಿಕೆ:2202-03-103-2-01-(041) 'ಇತರೆ ಸರ್ಕಾರಿ ಕಾಲೇಜುಗಳು' ಅಡಿಯಲ್ಲಿ ಪ್ರಯಾಣ ವೆಚ್ಚಕ್ಕಾಗಿ ಬಿಡುಗಡೆ ಮಾಡಿರುವ ಅನುದಾನದ ವಿವರಣಾ ಪಟ್ಟಿ

ಆದೇಶ ಸಂಖ್ಯೆ:ಕಾಶಿಇ:05:ಯೋಜನೆ:ಅ.ಬಿ:2021-22, ದಿನಾಂಕ:08.10.2021 ಕ್ಕೆ ಅನುಬಂಧ-2

| ಕ್ರ. ಸಂ. | ಪ್ರಾದೇಶಿಕ ಕಛೇರಿ | ಬಿಡುಗಡೆ ಮಾಡಿರುವ ಅನುದಾನ (ರೂ.ಗಳಲ್ಲಿ) |
|---|---|---|
| 1 | ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು | 20000 |
| 2 | ಪ್ರಾದೇಶಿಕ ಜಂಟಿ ನಿರ್ದೇಶಕರು, ಮೈಸೂರು | 15000 |
| 3 | ಪ್ರಾದೇಶಿಕ ಜಂಟಿ ನಿರ್ದೇಶಕರು, ಮಂಗಳೂರು | 35000 |
| 4 | ಪ್ರಾದೇಶಿಕ ಜಂಟಿ ನಿರ್ದೇಶಕರು, ಶಿವಮೊಗ್ಗ | 30000 |
| 5 | ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ | 30000 |
| 6 | ಪ್ರಾದೇಶಿಕ ಜಂಟಿ ನಿರ್ದೇಶಕರು, ಕಲಬುರಗಿ | 20000 |
| ಒಟ್ಟು (ಒಂದು ಲಕ್ಷದ ಐವತ್ತು ಸಾವಿರ ರೂ.ಗಳು ಮಾತ್ರ) | | 150000 |

ಕಾಲೇಜು ಶಿಕ್ಷಣ ನಿರ್ದೇಶಕರು

Plan_05_2021-22_Grant release.docx

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

2021-22ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಲೆಕ್ಕಶೀರ್ಷಿಕೆ:2202-03-103-2-01-(051) 'ಇತರೆ ಸರ್ಕಾರಿ ಕಾಲೇಜುಗಳು' ಅಡಿಯಲ್ಲಿ ಪೀಠೋಪಕರಣ, ಕಾನೂನು ಕಾಲೇಜುಗಳ ಸಂಯೋಜನಾ ಶುಲ್ಕಕ್ಕಾಗಿ ಮತ್ತು ಶವಸಂಸ್ಕಾರ ವೆಚ್ಚಕ್ಕಾಗಿ ಬಿಡುಗಡೆ ಮಾಡಿರುವ ಅನುದಾನದ ವಿವರಣಾ ಪಟ್ಟಿ.

ಆದೇಶ ಸಂಖ್ಯೆ:ಕಾಶಿಇ:05:ಯೋಜನೆ:ಅ.ಬಿ:2021-22, ದಿನಾಂಕ:08.10.2021 ಕ್ಕೆ ಅನುಬಂಧ-1

| ಕ್ರ..ಸಂ | ಕಾಲೇಜಿನ ಹೆಸರು | ಬಿಡುಗಡೆ ಮಾಡಿರುವ ಅನುದಾನ (ರೂ.ಗಳಲ್ಲಿ) | ಉದ್ದೇಶ |
|---|---|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮನಗೂಳಿ. | 100000 | ಪೀಠೋಪಕರಣ |
| 2 | ಸರ್ಕಾರಿ ಕಾನೂನು ಕಾಲೇಜು, ಹೊಳೆನರಸೀಪುರ. | 1400000 | ಸಂಯೋಜನೆ ಶುಲ್ಕ |
| 3 | ಸರ್ಕಾರಿ ಕಾನೂನು ಕಾಲೇಜು, ಹಾಸನ. | 800000 | ಸಂಯೋಜನೆ ಶುಲ್ಕ |
| 4 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ತುಮಕೂರು | 15000 | ಶವ ಸಂಸ್ಕಾರ ವೆಚ್ಚಕ್ಕಾಗಿ |
| 5 | ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು | 15000 | |
| 6 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ | 15000 | |
| 7 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳಲ್ಕೆರೆ. | 15000 | |
| 8 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಿತ್ರದುರ್ಗ | 10000 | |
| ಒಟ್ಟು (ಇಪ್ಪತ್ಮೂರು ಲಕ್ಷದ ಎಪ್ಪತ್ತು ಸಾವಿರ ರೂ.ಗಳು ಮಾತ್ರ) | | 2370000 | |

ಕಾಲೇಜು ಶಿಕ್ಷಣ ನಿರ್ದೇಶಕರು